"ನೀವು ನಂಬ್ತೇವೆ ಅಂತ ಪ್ರಾಮೀಸ್ ಮಾಡಿದರೆ ಹೇಳ್ತೇನೆ. ಇಲ್ಲವಾದರೆ ಗಂಟುಮೂಟೆ ಕಟ್ಟಿಕೊಂಡು ನೀವು ಈವತ್ತೇ ನಿಮ್ಮ ದೇಶಕ್ಕೆ ಹೋಗಬಹುದು. ನೀವು ಫೀಯನ್ನು ರಿಫಂಡ್ ಮಾಡುತ್ತೇನೆ" ಎಂದುಬಿಟ್ಟ. ಇವರಿಗೆ ಆಶ್ಚರ್ಯ, ಇದೇನು ಹೀಗೆ ಹೇಳ್ತಾನಿದ್ದಾನಿವ!

"ಪ್ರಾಮೀಸ್ ಮಾಡ್ತೀವಿ ಹೇಳಿ"—ಎಂದರು ಇಬ್ಬರೂ ಒಟ್ಟಾಗಿ.

"ಈಗಲೇ ಇನ್ನೊಂದಕ್ಕೂ ಪ್ರಾಮೀಸ್ ಮಾಡಬೇಕು, ಈ ವಿಷಯ ಯಾರಿಗೂ ಹೇಳೋದಿಲ್ಲ ಅಂತ."

"ಹಾಂ ಹಾಂ, ಅದಕ್ಕೂ ಪ್ರಾಮೀಸ್" ಎಂದರು ಇಬ್ಬರೂ.

ವಿಲ್ಲೀ ಹೇಳತೊಡಗಿದ –

"ಮೂವತ್ತು ವರ್ಷಗಳ ಹಿಂದೆ ಈ ದ್ವೀಪ ನಿರ್ಜನವಾಗಿತ್ತು. ನಾರ್ವೇಜಿಯನ್ ವಿಜ್ಞಾನಿಯೊಬ್ಬರು ಇಲ್ಲಿ ರಿಸರ್ಚಿಗೆ ಅಂತ ಬಂದರು. ಅವರ ಹೆಸರು ಡಾ. ವಿಲ್ಹೆಮ್ ಆಲ್ಬೊರ್ಗ. ಇಲ್ಲಿಯ ಜೀವಿಗಳನ್ನು ನೋಡಿ ಆಶ್ಚರ್ಯಪಟ್ಟರು. ಜೀವಿಗಳೆಂದರೆ ಅವೇನೂ ಪ್ರಾಣಿಗಳಲ್ಲ. ಎಷ್ಟೋ ಸಾವಿರ ವರ್ಷಗಳ ಹಿಂದಿನ ಪಳೆಯುಳಿಕೆ ಸಂತತಿಯ ಮಾನವ ತರಹದವರೇ. ಅವರಿಗೆ ಏನೋ ಒಂದು ಹೆಸರಿಟ್ಟರು."

"ಹ್ಯುಮನೊಯಿಡ್ಸ" ಎಂದರು ಇಬ್ಬರೂ.

"ಏನೋ ಒಂದು, ನಿಮ್ಮ ಹಾಗೆ ನಾನು ವಿದ್ಯಾವಂತನಲ್ಲ."

"ಇರಲಿ, ಮುಂದೆ ಹೇಳಿ."

"ಈ ಜೀವಿಗಳ ಮೈಮೇಲೆ ಗಾಯದ ಗುರುತುಗಳಿರುವುದನ್ನು ಗಮನಿಸಿದರು ಆ ವಿಜ್ಞಾನಿ. ಬಹುಶಃ ಶಾರ್ಕ್ ಮೀನುಗಳೋ, ಜೆಲ್ಲಿ ಮೀನುಗಳೋ ಅಥವಾ ಮೊಸಳೆಗಳೋ ಮಾಡಿದ ಗುರುತುಗಳವು. ಆಗ ಇಲ್ಲೆಲ್ಲಾ ಮೊಸಳೆಗಳದೇ ಇದ್ದಿರಬಹುದು ಸಾಮ್ರಾಜ್ಯ. ಅವು ಈ ಜೀವಿಗಳನ್ನು ತಿಂದು ಮುಗಿಸತೊಡಗಿದ್ದವು. ಈ ಅಲ್ಪಸಂಖ್ಯಾತ ಈ ಜೀವಿಗಳು ತಮ್ಮ ಕುಲದ ಭವಿತವ್ಯದ ಬಗ್ಗೆ ಯೋಚಿಸತೊಡಗಿದ್ದವು. ಬಚಾವಾಗಲು ನೀರಿನಾಶ್ರಯ ಪಡೆಯುವುದು ಸರಿ ಅನ್ನಿಸಿರಬೇಕು. ನೀರು ಸೇರಿದ್ದವು. ಅಲ್ಲಿಯ ಮೀನುಗಳನ್ನು ಇತರ ಸಣ್ಣ ಸಣ್ಣ ಪ್ರಾಣಿಗಳನ್ನು ತಿಂದು ಜೀವನ ಸಾಗಿಸಿದ್ದವು. ಈ ದ್ವೀಪ ನಿರ್ಜನವಾದ ಕತೆಯಿದು" – ಎಂದು ಹೇಳಿ ವಿಶ್ರಾಂತಿ ಪಡೆಯಲೆಂದು "ಕಾಫಿ ತಗೊಳ್ತೀರಾ?" ಎಂದು ಕೇಳಿದ.

"ಓ, ಸಂತೋಷ. ನಮಗೆ ಬೇಕಾದುದನ್ನೇ ನೀವು ಹೇಳಿದಿರಿ" ಎಂದು ಹರ್ಷ ವ್ಯಕ್ತಪಡಿಸಿದರು ಇಬ್ಬರೂ.

ವಿಲ್ಲೀ ವೇಟರನನ್ನು ಕರೆದು ಎರಡು ಕಾಫಿಗೆ ಆರ್ಡರ್ ಮಾಡಿ, "ನೀವು ಕಾಫಿ ಮುಗಿಸಿರಿ, ಎರಡು ನಿಮಿಷಗಳಲ್ಲಿ ಬಂದುಬಿಡುವೆ" ಎನ್ನುತ್ತ ಹೋಗಿ ನೀರಿನಲ್ಲಿಳಿದು ಹೋದ. ಏನೋ ಕೆಲಸ ಇರಬಹುದೆಂದುಕೊಂಡರಿವರು.

ಕಾಫಿ ತಂದಿಟ್ಟ ವೇಟರ್.

ಸೇವಿಸುತ್ತ, "ಎಷ್ಟೊಂದು ಮಾಹಿತಿಯಿದೆ ಈ ವಿಲ್ಲೀ ಹತ್ತಿರ" ಎಂದು ಎಸ್ಟೆಲ್ಲಾ ಹುಬ್ಬೇರಿಸಿದಳು. "ಯಾರ ಹತ್ತಿರ ಎಷ್ಟು ಹೊತ್ತು ಮಾತಾಡಬೇಕೆಂಬ ಸಮಯಪ್ರಜ್ಞೆಯೂ ಇದೆ" ಎಂದು ಮಿಮಿ ಕೂಡ ಪ್ರಶಂಸಿಸಿದಳು. ಇವರ ಕಾಫಿ ಮುಗಿಯುವ ಸಮಯಕ್ಕೆ ಸರಿಯಾಗಿ ವಿಲ್ಲೀ ಹಾಜರಾದ. ನೀರಿನಲ್ಲಿ ಪೂರ್ಣ ಮುಳುಗಿ ಬಂದಿದ್ದ.

"ಹಾಂ, ಎಲ್ಲಿಗೆ ಬಂದಿದ್ದೆ? ಆ ಜೀವಿಗಳು ಸಮುದ್ರದೊಳಗೇ ತಮ್ಮ ನೆಲೆ ಕಂಡುಕೊಂಡಿದ್ದವು.